# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ವಿಧಾನಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 1572 |
| ವಿಷಯ | : | ಗ್ರಾಮ ಪಂಚಾಯಿತಿಗಳ ಜಲಜೀವನ್ ಕಾಮಗಾರಿಗಳ ಕುರಿತು. |
| ಉತ್ತರಿಸಬೇಕಾದ ದಿನಾಂಕ | : | 21.03.2025 |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜೆಜೆಎಮ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳೆಷ್ಟು; ಕುಡಿಯುವ ನೀರಿನ ಮೂಲಗಳಾದ ಕೊಳವೆ ಬಾವಿ ಮತ್ತು ನದಿಯಾಧಾರಿತ ಸಮಾನಾಂತರ ಜಲಮೂಲ ಮೂಲಕ ಎಷ್ಟು ಮನೆಗಳಿಗೆ ಕುಡಿಯುವ ನೀರು ಒದಗಿಸಲಾಗಿದೆ?<br><br>ಕೆಲ ಜಿಲ್ಲೆಗಳಲ್ಲಿ ಏಕಗ್ರಾಮ, ಬಹುಗ್ರಾಮ ಯೋಜನೆಗಳು ಪೂರ್ಣವಾಗದಿದ್ದರೂ ಟ್ಯಾಂಕುಗಳನ್ನು ನಿರ್ಮಿಸಿ ನೀರು ಸಂಗ್ರಹಿಸಿದ ಪ್ರಕರಣಗಳೆಷ್ಟು; ಇಂತಹ ಟ್ಯಾಂಕುಗಳ ಬಾಳಿಕೆ ಮತ್ತು ಸುರಕ್ಷತೆಗೆ ಏನು ಕ್ರಮವಹಿಸಲಾಗಿದೆ: | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜೆಜೆಎಮ್ ಯೋಜನೆಯಡಿ ಕ್ರಮವಾಗಿ 707 ಮತ್ತು 527 ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ;<br>ಕುಡಿಯುವ ನೀರಿನ ಮೂಲಗಳಾದ ಬಾವಿ ಮತ್ತು ನದಿಯಾಧಾರಿತ ಸಮಾನಾಂತರ ಜಲಮೂಲ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರಮವಾಗಿ 56,021 ಮನೆಗಳಿಗೆ ಮತ್ತು 7,313 ಮನೆಗಳಿಗೆ, ಒಟ್ಟು 63,334 ಮನೆಗಳಿಗೆ ಮತ್ತು ಉಡುಪಿ ಜಿಲ್ಲೆಯಲ್ಲಿ ಕ್ರಮವಾಗಿ 2,03,841 ಮನೆಗಳಿಗೆ ಮತ್ತು 10,153 ಮನಗಳಿಗೆ, ಒಟ್ಟು 2,13,994 ಮನೆಗಳಿಗೆ ಕುಡಿಯುವ ನೀರು ಒದಗಿಸಲಾಗಿರುತ್ತದೆ.<br><br>ಜಲ ಜೀವನ್ ಮಿಷನ್ ಯೋಜನೆಯಡಿ ಏಕಗ್ರಾಮ ಹಾಗೂ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಜನವಸತಿಯ ಜನಸಂಖ್ಯೆಗೆ ಅನುಗುಣವಾಗಿ ಟ್ಯಾಂಕ್‌ಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ.<br>ಏಕಗ್ರಾಮ ಕುಡಿಯುವ ನೀರಿನ ಯೋಜನೆಗಳಡಿ ನಿರ್ಮಿಸಲಾದ ಟ್ಯಾಂಕ್‌ಗಳಿಗೆ ಅಂತರ್ಜಲ ಮೂಲದಿಂದ ನೀರು ಸಂಗ್ರಹಿಸಿ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಹಾಗೂ ಬಹುಗ್ರಾಮ ಯೋಜನೆಗಳಲ್ಲಿ ಪೂರ್ಣಗೊಂಡ ಟ್ಯಾಂಕ್‌ಗಳನ್ನು ಸಂಬಂಧಪಟ್ಟ ಯೋಜನೆಗಳು ಪೂರ್ಣಗೊಂಡ ನಂತರ ಏಕಗ್ರಾಮ ಯೋಜನೆಗಳೊಂದಿಗೆ ಸಂಯೋಜಿಸಿ trail run and commissioning ಮಾಡಿದ ನಂತರ ಸಂಬಂಧಪಟ್ಟ ಗ್ರಾಮಗಳಿಗೆ ಹಸ್ತಾಂತರಿಸಲಾಗುವುದು. |

| | | |
|---|---|---|
| ಆ) | ಜೆ.ಜೆ.ಎಮ್. ಯೋಜನೆಯ ನೀರು ಸ್ಥಾವರ, ಟ್ಯಾಂಕುಗಳು, ಪೈಪ್ ಲೈನ್ ಇತ್ಯಾದಿ ತಾಂತ್ರಿಕ ವ್ಯವಸ್ಥೆಯನ್ನೊಳಗೊಂಡ ಆಸ್ತಿಗಳನ್ನು ಗುಣಮಟ್ಟವನ್ನು ಖಾತ್ರಿಪಡಿಸಿ ಹಸ್ತಾಂತರ ನೀಡಲು ಮತ್ತು ಪಡೆಯಲು ಸಕ್ಷಮ ಪ್ರಾಧಿಕಾರಗಳು ಯಾರು, ಗ್ರಾಮ ಪಂಚಾಯತಿಗಳು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ವಹಿಸಲು ತಾಂತ್ರಿಕ ಪರಿಣತಿ & ಸಂಪನ್ಮೂಲವನ್ನು ಯಾವ ರೀತಿ ಖಾತರಿಪಡಿಸಿದೆ; | ಜಲ ಜೀವನ್ ಮಿಷನ್ ಯೋಜನೆಯ ನೀರು ಸ್ಥಾವರ, ಟ್ಯಾಂಕುಗಳು, ಪೈಪ್‌ಲೈನ್ ಇತ್ಯಾದಿ ತಾಂತ್ರಿಕ ವ್ಯವಸ್ಥೆಯನ್ನೊಳಗೊಂಡ ಆಸ್ತಿಗಳನ್ನು 3ನೇ ವ್ಯಕ್ತಿ ಸಂಸ್ಥೆಯ ತಪಾಸಣಾ ಸಂಸ್ಥೆಯವರಿಂದ (TPIA) ಮತ್ತು State Quality Monitor (SQM) ತಂಡದಿಂದ ಕಾಲಕಾಲಕ್ಕೆ ತಪಾಸಣೆಯನ್ನು ನಡೆಸಲಾಗುತ್ತಿದ್ದು, ಗುಣಮಟ್ಟವನ್ನು ಖಾತ್ರಿಪಡಿಸಿ ಆಯಾ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ನೀಡಿರುತ್ತಾರೆ ಮತ್ತು ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳಿಗೆ ಹಸ್ತಾಂತರಿಸಲಾಗುತ್ತಿದೆ.<br>ಕೇಂದ್ರ ಸರ್ಕಾರದ ನಿರ್ದೇಶನದನ್ವಯ ಶೇ.100ರಷ್ಟು ಕಾರ್ಯಾತ್ಮಕ ನಳ ಸಂಪರ್ಕ ಒದಗಿಸಿದ ಗ್ರಾಮಗಳನ್ನು ಹರ್ ಘರ್ ಜಲ್ ಗ್ರಾಮವೆಂದು ಘೋಷಿಸಬೇಕಾಗಿರುತ್ತದೆ. ಅದರಂತೆ, ಗ್ರಾಮಮಟ್ಟದ ನೀರು ಮತ್ತು ನೈರ್ಮಲ್ಯ ಸಮಿತಿಯಿಂದ (VWSM) ಯೋಜನೆಯ ನೀರು ಸ್ಥಾವರ, ಟ್ಯಾಂಕುಗಳು, ಪೈಪ್ ಲೈನ್ ಇತ್ಯಾದಿ ತಾಂತ್ರಿಕ ವ್ಯವಸ್ಥೆಯನ್ನೊಳಗೊಂಡ ಆಸ್ತಿಗಳನ್ನು ಗುಣಮಟ್ಟವು ತೃಪ್ತಿಕರವಾಗಿರುವುದನ್ನು ದೃಢೀಕರಿಸಿಕೊಳ್ಳಲಾಗುತ್ತಿದೆ.<br>ಗ್ರಾಮ ಪಂಚಾಯತಿಗಳು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ವಹಿಸಲು ತಾಂತ್ರಿಕ ಪರಿಣತಿ ಮತ್ತು ಸಂಪನ್ಮೂಲವನ್ನು ಜಾರಿಯಲ್ಲಿರುವ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ನೀತಿಯಂತೆ ಖಾತರಿಪಡಿಸುತ್ತದೆ. |
| ಇ) | ಜೆ.ಜೆ.ಎಮ್. ಯೋಜನೆಯಡಿ ಕಾಮಗಾರಿಗಳನ್ನು ನಿರ್ವಹಿಸುವಾಗ ವಿವಿಧ ರಸ್ತೆಗಳನ್ನು, ರಸ್ತೆ ಬದಿ, ಚರಂಡಿಗಳನ್ನು ಕಡಿತ ಮಾಡಿದ್ದನ್ನು ಸರಿಮಾಡಿದೆಯೇ. ಮಾಡಿದ್ದಲ್ಲಿ ರಾಷ್ಟ್ರೀಯ ಹೆದ್ದಾರಿ. ಲೋಕೋಪಯೋಗಿ ಮತ್ತು ಜಿಲ್ಲಾ ಪಂಚಾಯತಿ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳಿಂದ ದೃಢೀಕರಣ ಪಡೆಯಲಾಗಿದೆಯೇ (ಜಿಲ್ಲಾವಾರು ಕ್ರೋಢೀಕೃತ ಮಾಹಿತಿ ನೀಡುವುದು) | ಜೆಜೆಎಂ ಯೋಜನೆಯಡಿ ಕಾಮಗಾರಿಗಳನ್ನು ನಿರ್ವಹಿಸುವಾಗ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಗಳಿಂದ ರಸ್ತೆ ಅಗೆಯಲು ಸೂಕ್ತ ಅನುಮತಿಯನ್ನು ಪಡೆದು ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. |

| | | |
|---|---|---|
| | | ರಾಜ್ಯದಲ್ಲಿ ಕೊಳವೆ ಕಾಮಗಾರಿಗಾಗಿ ಒಟ್ಟು 1,40,965.75 ಕಿ.ಮೀ ನಷ್ಟು ರಸ್ತೆ ಅಗೆಯಬೇಕಾದ್ದು, ಇದುವರೆವಿಗೂ 93,017.42 ಕಿ.ಮೀ ನಷ್ಟು ರಸ್ತೆಯನ್ನು ಅಗೆಯಲಾಗಿದ್ದು, ಈ ಪೈಕಿ 79,752.91 ಕಿ.ಮೀ ನಷ್ಟು ರಸ್ತೆಯನ್ನು ಮರುಪೂರಣಗೊಳಿಸಲಾಗಿರುತ್ತದೆ. ಇನ್ನು ಉಳಿದ 13,555.28 ಕಿ.ಮೀ ನಷ್ಟು ರಸ್ತೆ ಮರುಪೂರಣಕ್ಕೆ ಬಾಕಿಯಿರುತ್ತದೆ. **ಅನುಬಂಧ-1ರಲ್ಲಿ** ಲಗತ್ತಿಸಿದೆ |
| **ಈ)** | ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆಯ ಜಲಜೀವನ್ (ಜೆಜೆಎಮ್), ಏಕಗ್ರಾಮ. ಬಹುಗ್ರಾಮ ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಯಾವಾಗ ಮುಕ್ತಾಯಗೊಳಿಸಲಾಗುವುದು? | ಕೇಂದ್ರ ಸರ್ಕಾರ ಆದೇಶದನ್ವಯ ಜಲ ಜೀವನ್ ಮಿಷನ್ ಯೋಜನೆಯನ್ನು ಡಿಸೆಂಬರ್-2028ರವರೆಗೆ ವಿಸ್ತರಿಸಲಾಗಿದ್ದು, ರಾಜ್ಯದಲ್ಲಿ ಎಲ್ಲಾ ಯೋಜನೆಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು,

| ಜೆಜೆಎಂ ರಸ್ತೆ ಮರುಪೂರಣೀಕರಣ (ಜಿಲ್ಲಾವಾರು ವಿವರ) | | | | | |
|---|---|---|---|---|---|
| ಕ್ರ. ಸಂ | ವಿಭಾಗಗಳು | ಅಗೆದಿರುವ ರಸ್ತೆ ಒಟ್ಟು ಉದ್ದ (ಕಿ.ಮೀ ನಂತೆ) | ಅಗೆದು ಮರುಪೂರಣಗೊಳಿಸಿರುವ ರಸ್ತೆಯ ಒಟ್ಟು ಉದ್ದ (ಕಿ.ಮೀ ನಂತೆ) | ಮರುಪೂರಣಗೊಳಿಸಲು ಬಾಕಿಯಿರುವ ರಸ್ತೆ ಉದ್ದ (ಕಿ.ಮೀ ನಂತೆ) | ಶೇಕಡವಾರು |
| **1** | **2** | **3** | **4** | **5** | **6=(4/3)%** |
| 1 | ಬಳ್ಳಾರಿ | 1,223.26 | 1,138.82 | 84.44 | 93.10% |
| 2 | ವಿಜಯನಗರ | 1,946.51 | 1,619.16 | 327.35 | 83.18% |
| 3 | ಬೀದರ್ | 3,178.42 | 2,678.98 | 499.44 | 84.29% |
| | ಕಲಬುರಗಿ | 1,815.03 | 1,603.87 | 211.16 | 88.37% |
| 5 | ಕೊಪ್ಪಳ | 2,893.28 | 2,716.06 | 177.22 | 93.87% |
| 6 | ರಾಯಚೂರು | 1,941.54 | 1,773.62 | 167.92 | 91.35% |
| 7 | ಯಾದಗಿರಿ | 1,931.54 | 1,561.45 | 370.09 | 80.84% |
| 8 | ಬಾಗಕೋಟೆ | 3,068.77 | 2,893.30 | 175.47 | 94.28% |
| 9 | ಬೆಳಗಾವಿ | 4,621.37 | 4,276.15 | 345.22 | 92.53% |
| 10 | ಚಿಕ್ಕೋಡಿ | 3,379.18 | 3,171.44 | 207.74 | 93.85% |
| 11 | ಧಾರವಾಡ | 1,610.48 | 1,469.05 | 141.43 | 91.22% |
| 12 | ಗದಗ | 1,858.65 | 1,822.26 | 36.39 | 98.04% |
| 13 | ಹಾವೇರಿ | 2,095.41 | 1,774.74 | 320.67 | 84.70% |
| 14 | ಉತ್ತರ ಕನ್ನಡ | 603.69 | 572.13 | 31.56 | 94.77% |
| 15 | ವಿಜಯಪುರ | 3,239.70 | 3,013.32 | 226.38 | 93.01% |
| 16 | ಚಾಮರಾಜನಗರ | 3,483.46 | 3,133.81 | 349.65 | 89.96% |
| 17 | ಚಿಕ್ಕಮಗಳೂರು | 668.62 | 657.74 | 10.88 | 98.37% |
| 18 | ದಕ್ಷಿಣ ಕನ್ನಡ | 3,476.13 | 3,476.13 | 0.00 | 100.00% |
| 19 | ಹಾಸನ | 5,769.52 | 5,489.76 | 279.76 | 95.15% |
| 20 | ಕೊಡಗು | 139.68 | 139.68 | 0.00 | 100.00% |
| 21 | ಮಂಡ್ಯ | 8,247.81 | 4,680.12 | 3,567.69 | 56.74% |
| 22 | ಮೈಸೂರು | 6,342.34 | 5,983.24 | 359.10 | 94.34% |
| 23 | ಉಡುಪಿ | 2,970.12 | 2,970.12 | 0.00 | 100.00% |
| 24 | ಚಿಕ್ಕಬಳ್ಳಾಪುರ | 2,248.33 | 1,713.49 | 534.84 | 76.21% |
| 25 | ಚಿತ್ರದುರ್ಗ | 2,106.41 | 1,768.13 | 338.28 | 83.94% |
| 26 | ದಾವಣಗೆರೆ | 3,660.82 | 3,480.24 | 180.58 | 95.07% |
| 27 | ರಾಮನಗರ | 1,966.17 | 1,774.70 | 191.47 | 90.26% |
| 28 | ಶಿವಮೊಗ್ಗ | 116.43 | 111.40 | 5.03 | 95.68% |
| 29 | ತುಮಕೂರು | 5,019.65 | 3,172.91 | 1,846.74 | 63.21% |
| 30 | ಬೆಂಗಳೂರು ನಗರ | 4,278.06 | 3,825.76 | 452.30 | 89.43% |
| 31 | ಬೆಂಗಳೂರು (ಗ್ರಾ) | 4,318.95 | 2,926.68 | 1,392.27 | 67.76% |
| 32 | ಕೋಲಾರ | 3,075.06 | 2,193.85 | 881.21 | 71.34% |
| **ಒಟ್ಟು** | | **93,137.38** | **79,582.10** | **13,555.28** | **85.45%** |